## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

***ಸಿ.ಸಿ. ಸಂಖ್ಯೆ : 552/2016***

***ಚಾಸಾ : 11***
***ಪ್ರಾಸಾ : 5***

| | |
|---|---|
| **ಹೆಸರು** | : ನಾಣಯ್ಯ |
| **ತಂದೆಯ ಹೆಸರು** | : ಪೊನ್ನಪ್ಪ |
| **ವಯಸ್ಸು** | : 58 ವರ್ಷ |
| **ಉದ್ಯೋಗ** | : ಸೂಪರ್ ವೈಸರ್, ಕೊಳಗುಂಡಿ ಎಸ್ಟೇಟ್ ಪಾಲಿಬೆಟ್ಟ |
| **ವಾಸಸ್ಥಳ** | : ಕುಶಾಲನಗರ |

**ದಿನಾಂಕ : *16-02-2024* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

*ಶ್ರೀ. ಎಪಿಪಿಯವರಿಂದಃ-  ಭಾ. ದಂ. ಸಂ. 299* ರಡಿಯಲ್ಲಿ ಮುಖ್ಯ ವಿಚಾರಣೆ

ಚಾಸಾ-1 ರವರ ಪರಿಚಯವಿರುತ್ತದೆ. ಅವರು ನಮ್ಮ ಸಾಹುಕಾರರು. ಚಾಸಾಃ ರವರ ಪರಿಚಯವಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ. ಸಾಕ್ಷಿಗೆ ದಿನಾಂಕ *30-09-2010* ರ ಕೃತ್ಯ ಸ್ಥಳದ ಮಹಜರಿನ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಸದರಿ ಕೃತ್ಯ ಸ್ಥಳದ ಮಹಜರಿನ ದೃಢೀಕೃತ ನಕಲನ್ನು ನಿಪಿ *9* ಎಂದು, ಸಾಕ್ಷಿಯ ಸಹಿಯನ್ನು ನಿಪಿ*9*(ಎ) ಎಂದು ಗುರುತಿಸಲಾಯಿತು. ಸದರಿ ಮಹಜರಿನಲ್ಲಿರುವ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸ. ಸ. ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ಸಾಕ್ಷಿಗೆ ನಿಪಿ9 ನ್ನು ಓದಿ ಹೇಳಲಾಯಿತು. ದಿನಾಂಕ 30-09-2010 ರಂದು ಪೋಲಿಸರು ನನ್ನನ್ನು, ಚಾಸಾ1 ಹಾಗೂ 8 ರವರನ್ನು 1 ಹಾಗೂ 2 ನೇ ಆರೋಪಿಗಳು ತೋರಿಸಿದ ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ 1 ಹಾಗೂ 2 ನೇ ಆರೋಪಿಗಳು ತೋರಿಸಿ ಕೊಟ್ಟ ಜಾಗದಲ್ಲಿ ಪೋಲಿಸರು ನನ್ನ, ಚಾಸಾ1 ಹಾಗೂ ಚಾಸಾ-8 ರವರ ಸಮಕ್ಷಮ ನಿಪಿ 9 ರಂತೆ ಮಹಜರ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಿನಾಂಕದಂದು ನಿಪಿ 9 ನ್ನು ಬರೆಯುವಾಗ ನಾನು ಸ್ಥಳದಲ್ಲಿದ್ದು, ನಿಪಿ9 ರಲ್ಲಿರುವ ಸಂಗತಿಗಳನ್ನು ತಿಳಿದುಕೊಂಡು, ಅದಕ್ಕೆ ಸಹಿ ಮಾಡಿದ್ದರೂ ಸಹ 2 ನೇ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.